ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಪರೀಕ್ಷೆಯಲ್ಲಿ ಮೀಸಲಾತಿ ಕ್ಲೇಮು ಕುರಿತು

ಶ್ರೀ ಪಿ. ಆರ್. ರಮೇಶ್(ನಾಮನಿರ್ದೇಶನ ಹೊಂದಿದವರು) -

352 (442) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) 2015ನೇ ಸಾಲಿನ ಗೆಜೆಟೆಡ್ ಪ್ರೋಬೆಷನರಿ ಪರೀಕ್ಷೆಯಲ್ಲಿ ಮೀಸಲಾತಿ ಕ್ಲೇಮು ಮಾಡಿ ಸಾಮಾನ್ಯ ವರ್ಗದಲ್ಲಿ ಆಯ್ಕೆ ಮಾಡಿ, ನೇಮಕಾತಿ ಮಾಡಿದ ಸಹಾಯಕ ಆಯುಕ್ತರ (ಕೆ. ಎ. ಎಸ್. ಕಿರಿಯ ಶ್ರೇಣಿ) ಅಭ್ಯರ್ಥಿಗಳ ಸಂಖ್ಯೆ ಎಷ್ಟು; (ಹೆಸರು ಮತ್ತು ಅವರು ಕ್ಲೇಮು ಮಾಡಿದ ಮೀಸಲಾತಿ ವರ್ಗದ ವಿವರ ನೀಡವುದು)

(ಆ) ಈ ರೀತಿ ಮೀಸಲಾತಿ ಕ್ಲೇಮು ಮಾಡಿ, ಸಾಮಾನ್ಯ ವರ್ಗದಲ್ಲಿ ನೇಮಕಾತಿ ಮಾಡಿದ ಅಭ್ಯರ್ಥಿಗಳ ಜಾತಿ, ಆದಾಯ ಸಿಂಧುತ್ವ ಪ್ರಮಾಣ ಪತ್ರಗಳನ್ನು ಪಡೆದ ನಂತರವೇ ಇವರಿಗೆ ನೇಮಕಾತಿ ಮಾಡಲಾಗಿದೆಯೇ;(ವಿವರ ನೀಡುವುದು)

(ಇ) ಇಲ್ಲದಿದ್ದಲ್ಲಿ, ಪೂರ್ವ ಭಾವಿ ಪರೀಕ್ಷೆಯಲ್ಲಿ ಮುಖ್ಯ ಪರೀಕ್ಷೆಗೆ ಮೀಸಲಾತಿ ಅಡಿಯಲ್ಲಿ ಮಾತ್ರ ಅರ್ಹರಿದ್ದು, ಸಾಮಾನ್ಯ ವರ್ಗದಲ್ಲಿ ಕಡಿಮೆ ಅಂಕಗಳಿಸಿದ ಕಾರಣ ಅನರ್ಹರಿದ್ದು ಇಂತಹ ಅಭ್ಯರ್ಥಿಗಳ ಜಾತಿ ಆದಾಯ ಸಿಂಧುತ್ವ ಪ್ರಮಾಣ ಪತ್ರಗಳನ್ನು ಪಡೆಯದೇ ನೇಮಕಾತಿ ಆದೇಶ ನೀಡುವುದು ನಿಯಮ/ಕಾಯ್ದೆಗಳನ್ನು ಉಲ್ಲಂಘಿಸಿದಂತೆ ಆಗಿಲ್ಲವೇ? (ವಿವರ ನೀಡುವುದು)